**2 ನೇ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಒ ಎಸ್ 12/2017**

ದಿನಾಂಕಃ 04-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯುಃ3

| | |
|---|---|
| ಸಾಕ್ಷಿಯ ಹೆಸರು | ಃ ನೇತ್ರಾವತಿ ಬಿ ಆರ್ |
| ಗಂಡನ ಹೆಸರು | ಃ ಲೋಕೇಶ್ |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ಪಿ ಡಿ ಒ |
| ವಾಸ | ಃ ಬ್ಯಾಗಡೇಹಳ್ಳಿ |

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಆರ್ ಹೆಚ್ ವಕೀಲರಿಂದಃ**

ಅಕ್ಟೋಬರ್ 2, 2023 ರಿಂದ ಇಲ್ಲಿಯವರೆಗೂ ನಾನು ಪಿ ಡಿ ಒ ಆಗಿ ಬ್ಯಾಗಡೇಹಳ್ಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಾವಾ ಸ್ವತ್ತಿನ ಅಸೆಸ್ಮೆಂಟ್ ಸಂಖ್ಯೆಃ 424/ಎ ಆಗಿರುತ್ತದೆ. ಸದರಿ ಸ್ವತ್ತಿನ ಮಾಲೀಕರು ಈ ದಾವೆಯ ವಾದಿಯಾಗಿರುತ್ತಾರೆ. ಸಾಕ್ಷಿಗೆ 3 ದಾಖಲಾತಿಗಳನ್ನು ತೋರಿಸಿ, ಸದರಿ ದಾಖಲೆಗಳು ನಿಮ್ಮ ಇಲಾಖೆಯಿಂದ ನೀಡಿದ ದಾಖಲೆಗಳು ಎಂದರೆ ಸಾಕ್ಷಿಯು ಅವುಗಳನ್ನು ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿಪಿ-9 ರಿಂದ ನಿಪಿ-11 ಎಂದು ಗುರುತಿಸಲಾಯಿತು. ನಿಪಿ-9 ರ ದಾಖಲೆಯನ್ನು ಮಾಹಿತಿ ಹಕ್ಕಿನ ಕೆಳಗೆ ಅರ್ಜಿಯನ್ನು ಸಲ್ಲಿಸಿದಾಗ ನಮ್ಮ ಇಲಾಖೆಯಿಂದ ಅಸೆಸ್ಮೆಂಟ್ ಸಂಖ್ಯೆಃ 424/ಎ ಗೆ ಸಂಬಂಧಿಸಿದಂತೆ ದಿಃ 08-03-2023 ರಂದು ಮಾಹಿತಿ ನೀಡಿದ ಪತ್ರವಾಗಿರುತ್ತದೆ. ಸದರಿ ನಿಪಿ-9 ರ ಮಾಹಿತಿ ಪತ್ರದ ಜೊತೆಗೆ ನಿಪಿ-10 ಮತ್ತು 11 ರ ನಕ್ಷೆ ಮತ್ತು ಇ-ಸ್ವತ್ತಿಗಾಗಿ ಮತ್ತು ಇತರೇ ತೆರಿಗೆಗಳನ್ನು ಪಾವತಿಸಿದ ಬಗ್ಗೆ ನೀಡಿದ ರಶೀದಿಯಾಗಿದ್ದು, ಸದರಿ ದಾಖಲೆಗಳನ್ನು ನಮ್ಮ ಇಲಾಖೆಯಿಂದ ನೀಡಿದ ದಾಖಲೆಯಾಗಿರುತ್ತದೆ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ-10 ರ ದಾಖಲೆಯನ್ನು ದಿಃ 08-03-2023 ರಂದು ನೀಡಿದ ನಂತರ ಸದರಿ ದಾಖಲೆಯ ಮೇಲೆ ಮೇಲಾಧಿಕಾರಿಯವರಿಂದ ಯಾವುದೇ ವ್ಯವಹರಣೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ದಿಃ 02-10-2023 ರಂದು ಗರ್ಜೆ ಗ್ರಾಮ ಪಂಚಾಯಿತಿಗೆ ವರ್ಗಾವಣೆಯಾಗಿದ್ದರಿಂದ ಹೊಸದಾಗಿ ಬಂದಿದ್ದರಿಂದ ಅದರ ಬಗ್ಗೆ ಏನು ಕ್ರಮ ಕೈಗೊಂಡಿರುತ್ತಾರೆಂಬ ಮಾಹಿತಿ ನನಗೆ ಗೊತ್ತಿಲ್ಲ. ನಿಪಿ-10 ಕ್ಕೆ ಸಂಬಂಧಿಸಿದಂತೆ ನನ್ನ ಮೇಲಾಧಿಕಾರಿಗಳು ನಾನು ವರ್ಗಾವಣೆಯಾದ ನಂತರವೂ ಸಹ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ದಿಃ 08-03-2023 ರಿಂದ 02-10-2023 ರ ವರೆಗೆ ನಿಪಿ-10 ರ ಸಂಬಂಧವಾಗಿ ನನ್ನ ಮೇಲಾಧಿಕಾರಿಗಳಿಂದ ಯಾವುದೇ ವ್ಯವಹರಣೆ ಮಾಡಿದ ಬಗ್ಗೆ ನಮ್ಮ ಕಡತದಲ್ಲಿಯೂ ಮಾಹಿತಿ ಲಭ್ಯವಿರುವುದಿಲ್ಲ. ನಿಪಿ-10 ರ ದಾಖಲೆಯು ಸರ್ವೇ ಇಲಾಖೆಯ ಭೂ-ಮಾಪಕರು ತಾಲ್ಲೂಕು ಕಚೇರಿ, ಕಡೂರು ರವರು ನೀಡಿದ ದಾಖಲೆಯಾಗಿರುತ್ತದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಾವುದೇ ಆಸ್ತಿಯನ್ನು ಅಳತೆ ಮಾಡುವಾಗ ಮತ್ತು ಮಾಡಿಸುವಾಗ ಸರ್ವೇ ಇಲಾಖೆಯ ಭೂ ಮಾಪಕರ ಸಹಾಯ ಪಡೆಯುತ್ತೇವೆ ಎಂದರೆ ಸಾಕ್ಷಿಯು ಇ-ಸ್ವತ್ತಿಗಾಗಿ ಅರ್ಜಿಯನ್ನು ಸಲ್ಲಿಸಿದಾಗ ಮಾತ್ರ ಸರ್ವೇ ಇಲಾಖೆಯವರು ಮತ್ತು ನಾವು ಜಂಟಿಯಾಗಿ ಅಳತೆ ಮಾಡುತ್ತೇವೆ. ಉಳಿದಂತೆ ಅರ್ಜಿದಾರರು ಅಳತೆ ಮಾಡಿಕೊಡಿ ಎಂದು ಅರ್ಜಿ ಸಲ್ಲಿಸಿದಾಗಲೂ ನಮ್ಮ ಇಲಾಖೆಯಿಂದ ಅಳತೆ ಮಾಡಿ ಕೊಡುತ್ತೇವೆ. ನಾವು ಮತ್ತು ಭೂಮಾಪಕರು ಜಂಟಿಯಾಗಿ

ಅಳೆತ ಮಾಡಿದ ನಂತರ  ಭೂಮಾಪಕರು ನೀಡಿದ ವರದಿಯನ್ನು ನಮ್ಮ ಇಲಾಖೆಯು ಒಪ್ಪಿಕೊಳ್ಳುತ್ತದೆ. ನಿಪಿ-10 ದಾಖಲೆಯಂತೆ  ನಮ್ಮ ಇಲಾಖೆಯವರು ಮತ್ತು ಭೂಮಾಪಕರು ಅಳತೆ ಮಾಡಿ ವರದಿ ನೀಡಿದ ನಂತರ  ಸದರಿ ವರದಿಯ ಆದಾರದ ಮೇಲೆ ವಾದಿಗೆ ಇ-ಸ್ವತ್ತನ್ನು ನೀಡಲು ತಕರಾರು ಇದ್ದುದ್ದರಿಂದ ಇ-ಸ್ವತ್ತನ್ನು ನೀಡಿರುವುದಿಲ್ಲ.

**(ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
2 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.